## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 424/2022

ಸಾಕ್ಷಿಗೆ ದಿನಾಂಕ 08-02-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 3 P.W.: 3

| | | |
|---|---|---|
| ಹೆಸರು | : | ಕೆ ಹುಚ್ಚಪ್ಪ |
| ತಾಯಿಯ ಹೆಸರು | : | ದುರುಗಮ್ಮ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ನೆಲ್ಲುಕುದುರಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ಮತ್ತು 1 ರಿಂದ 4 ನೇ ಆರೋಪಿತರು ನಮ್ಮ ಊರಿನವರಾಗಿದ್ದು ಪರಿಚಯ ಇರುತ್ತಾರೆ.

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಯಾರ್ಯಾರ ನಡುವೆ ಜಗಳವಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಕೆಲಸದ ನಿಮಿತ್ತ ಇಟಗಿ ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಪೋಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲೀಸರು ಪಂಚನಾಮೆ ಮತ್ತು ನಕಾಶೆಯನ್ನು ತಯಾರಿಸಿಲ್ಲ ಮತ್ತು ನಿಪಿ-4 ರ ಪೋಟೋದಲ್ಲಿ ನಾನಿದ್ದು ಯಾವ ಕಾರಣಕ್ಕಾಗಿ ಸದರಿ ಪೋಟೋ ತೆಗೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ-2 ರ ಪಂಚನಾಮೆ ಮತ್ತು ನಿಪಿ-3 ರ ನಕಾಶೆಯಲ್ಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ2 ಸಿ ಮತ್ತು 3 ಸಿ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೋಲೀಸರು ಯಾವುದೇ ಕಟ್ಟಿಗೆಯನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಸಮಕ್ಷಮದಲ್ಲಿರುವ ಮು ಮಾ-1 ನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

ನಾನು ಘಟನೆಯ ಸಂಬಂಧ ಪೋಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 02-04-2022 ರಂದು ಸಂಜೆ 5.15 ರ ಸಮಯದಲ್ಲಿ ಇಟಗಿ ಠಾಣಾ ಸಿಬ್ಬಂದಿಯಾದ ಚಾಸಾ-9 ರವರು ನಮ್ಮನ್ನು ಠಾಣಾ ಗುನ್ನ ನಂ. 37/2022 ರಲ್ಲಿ ಪಂಚನಾಮೆಗೆ ಸಹಕರಿಸುವಂತೆ ಕೇಳಿದ್ದು, ಚಾಸಾ-1 ರವರು ತೋರಿಸಿದ ಅವರ ಹೊಲದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಸಂಜೆ 5.15 ರಿಂದ 6.15 ರವರೆಗೆ ಘಟನಾ ಸ್ಥಳದಲ್ಲಿ ಬರೆಯಲಾಗಿದ್ದು, ಚಾಸಾ-1 ರವರು ಕೊಟ್ಟಂತಹ 3 ವರೆ ಅಡಿ ಉದ್ದದ ತೆಳ್ಳನೆಯ ಕಟ್ಟಿಗೆಯನ್ನು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಚಾಸ-9 ರವರು ಜಪ್ತುಪಡಿಸಿಕೊಂಡಿದ್ದರೆಂದರೆ ಸರಿಯಲ್ಲ. ನನ್ನ ಸಮಕ್ಷಮ ಘಟನಾ ಸ್ಥಳದಲ್ಲಿ ನಿಪಿ-3 ರಂತೆ ನಕಾಶೆಯನ್ನು ತಯಾರಿಸಿ, ನಿಪಿ-4 ರಂತೆ ಕೃತ್ಯಸ್ಥಳದ ಫೋಟೋ ತೆಗೆಯಲಾಗಿದ್ದು, ಈ ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ದಿಃ 02-04-2022 ರಂದು ಸರ್ವೆ ನಂ.392 ರ ಸ್ವತ್ತಿಗೆ ಸಂಬಂಧಿಸಿದಂತೆ ಆರೋಪಿತರು ಹಾಗೂ ಚಾಸಾ-1 ರವರ ನಡುವೆ ಆದಂತಹ ಒಪ್ಪಂದವನ್ನು ಆರೋಪಿತರು ಅಲ್ಲಗಳೆದಿದ್ದು, ಈ ವಿಷಯದ ಸಂಬಂಧ ಅವರ ನಡುವೆ ಜಗಳವಾಗಿದ್ದು ಈ ಬಗ್ಗೆ ನಾನು ಪಂಚನಾಮೆಗೆ ಸಹಕರಿಸುವುದಾಗಿ ಈಗ ಓದಿ ಹೇಳಿದ ನಿಪಿ-5 ರಂತೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ